# B.A IVth Semester

# Unit VI INTOLERANCE

## ಅಸಹಿಷ್ಣುತೆ Intolerance

**ಪೀಠಿಕೆ:** ನಮ್ಮ ಭಾರತೀಯ ಸಮಾಜವು ವಿಭಿನ್ನವಾದ ಜಾತಿ, ಧರ್ಮ, ಸಂಸ್ಕೃತಿ ಭಾಷೆಗಳನ್ನು ಒಳಗೊಂಡ ದೇಶವಾಗಿದ್ದು ತನ್ನದೆ ಆದ ವಿಶಿಷ್ಟ ಪ್ರತಿಬಿಂಬವನ್ನು ಮೂಡಿಸಿದೆ. ನಮ್ಮ ಗುಟ್ಟು ಎಂದರೆ ವಿಭಿನ್ನತೆಯಲ್ಲಿ ಐಕ್ಯತೆಯ ಪರಂಪರೆಯನ್ನು ಪ್ರಾಚೀನ ಕಾಲದಿಂದಲೂ ಪರಿಪಾಲಿಸುತ್ತಾ ಬಂದಿದ್ದೇವೆ. ಇದು ಹೊಸದಾದ ವಿದ್ಯಮಾನವಾಗಿರದೆ, ಭಾರತೀಯ ಪ್ರಾಚೀನ ಸಂಸ್ಕೃತಿಯೆಂದು ಹೇಳಬಹುದು. ಹೀಗಾಗಿ ಇಲ್ಲಿ ವ್ಯಕ್ತಿ ವ್ಯಕ್ತಿಯ ನಡುವೆ , ಕುಟುಂಬ ಕುಟುಂಬದ ನಡುವೆ, ಸಮೂಹ ಸಮೂಹಗಳ ನಡುವೆ, ಅವರುಗಳು ನಿರ್ವಹಿಸುವ ವೃತ್ತಿ ಮತ್ತು ಪಾತ್ರಗಳು ಬೇರೆ ಬೇರೆಯಾಗಿರುವುದರಿಂದ ವಿವಿಧ ರೀತಿಯ ವಿರೋಧಗಳು ಕಂಡು ಬರುತ್ತವೆ. ಅಷ್ಟೆ ಅಲ್ಲದೆ ಜನರ ಊಟೋಪಚಾರ, ಉಡುಗೆ ತೊಡುಗೆ ಮತ್ತು ವೈಚಾರಿಕತೆಗೆ ಸಂಬಂಧಿಸಿದ ಚಟುವಟಿಕೆಗಳು ಕೂಡ ಭಿನ್ನ ವಿಭಿನ್ನವಾಗಿ ಕಂಡು ಬರುವುದರಿಂದ ಅವುಗಳು ಪರಸ್ಪರ ಹೊಂದಾಣಿಕೆಯಾಗದೆ ತಾತ್ಕಾಲಿಕ ಹಾಗೂ ಸಂದರ್ಭಕ್ಕನುಸಾರವಾಗಿ ಕೆಲವೊಮ್ಮೆ ಸಂಘರ್ಷಕ್ಕೆ ದಾರಿಮಾಡಿಕೊಡುವುದನ್ನು ಅಸಹಿಷ್ಣತೆಯೆನ್ನಬಹುದಾಗಿದೆ.

ಭಾರತೀಯ ಸಮಾಜವು ಪ್ರಾಚಿನ ಕಾಲದಿಂದಲೂ ಜಾತಿಪದ್ಧತಿಯನ್ನು ಆಚರಿಸಿಕೊಂಡು ಬಂದಿರುವದು, ವರ್ಣಾಶ್ರಮದ ಅನುಸಾರ ಉಚ್ಚ ಜಾತಿಯವರು ಮಾತ್ರ ಭೂ ಒಡೆತನವನ್ನು ಹೊಂದಿರುವುದು, ಉದ್ಯೋಗ ಅನುಸರಿಸುವುದು, ಶಿಕ್ಷಣವನ್ನು ಪಡೆಯುವುದು ಆಗಿದ್ದು, ಅಂದರೆ ಭಾರತ ದೇಶದ ಸಮಾಜವು ಜಾತಿ ವ್ಯವಸ್ಥೆಯಿಂದ ಸ್ತರವಿನ್ಯಾಸಗೊಂಡಿದ್ದು ಕೆಳ ಜಾತಿಗಳ ಮೇಲೆ ಮೇಲು ಜಾತಿಯವರಿಂದ ಆಗುವ ಅಡಚಣೆ, ಶೋಷಣೆ, ದಬ್ಬಾಳಿಕೆ, ಕೌರ್ಜನ್ಯವನ್ನು ಅನುಭವಿಸಿ ತಮಗೆ ಉಂಟಾದ ಹಿಂಜರಿಕೆಯ ಭಾವನೆ, ಕೀಳು ಸ್ಥಾನಮಾನ, ಕೆಳ ಅಂತಸ್ತು ಮತ್ತು ಸತತವಾಗಿ ಪರ ಅಥವಾ ಪರೋಕ್ಷ ರೀತಿಯಲ್ಲಿ ನಡೆಯುವ ಶೋಷಣೆಯ ವಿರುದ್ಧ ಸಂಘಟಿತರಾಗಿ ಸಿಡಿದೇಳುವ ಕ್ರೀಯೆಯನ್ನು ಅಸಹಿಷ್ಣತೆ ಎನ್ನಬಹುದು. ಇತ್ತೀಚೆಗೆ ಅಸಹಿಷ್ಣುತೆ ಜಗತ್ತಿನಾದ್ಯಂತ ಸಾರ್ವತ್ರಿಕವಾದ ಸ್ವರೂಪವನ್ನು ಪಡೆದುಕೊಂಡಿದಾಗಿದ್ದು ಪ್ರತಿಯೊಂದು ಸಮಾಜದಲ್ಲಿ ತನ್ನದೆ ಆದ ಸಾಮಾಜಿಕ ವಿಧ್ವಂಶಕ ಕೃತ್ಯಗಳು, ಸ್ಫೋಟಕ ಶಕ್ತಿ, ಮಾನವೀಯ ಸಮಾಜ ಶಕ್ತಿಯ ವಿರೋಧ ಅಲೆಗಳನ್ನು ಹುರಿದುಂಬಿಸಿ ಪರಿಣಾಮಕಾರಿ ರೀತಿಯಲ್ಲಿ, ಅಶಾಂತಿ, ಅರಾಜಕತೆ, ವಿಘಟನೆ, ದಂಗೆ, ಮುಷ್ಕರ, ಆಸ್ತಿ ಪಾಸ್ತಿಯ ಲೂಟಿ ಕಟ್ಟಗಳ ವಿನಾಶ, ಅಸಹನೀಯವಾದ ಕಾರ್ಯಗಳು ನಡೆಯುತ್ತಿವೆ. ಅಲ್ಲದೆ ದಿನದಿಕ್ಕೆ ಇಂತಹ ಅಮಾನವೀಯ ಚಟುವಟಿಕೆಗಳು ಹೆಚ್ಚಾಗುತ್ತಿವೆ.

ಒಬ್ಬ ವ್ಯಕ್ತಿಯ ಅಥವಾ ಒಂದು ವೈಯಕ್ತಿಕ ಜೀವನದ ಆದರ್ಶವಾದಕ್ಕೆ ಧಕ್ಕೆಯನ್ನುಂಟು ಮಾಡುವ ವಿಷಯದ ವಿರುದ್ಧವಾಗಿ ವಾದಿಸುವ ಕಾರ್ಯಪ್ರವೃತ್ತಿಯನ್ನು ಅಸಹಿಷ್ಣಿತೆ ಎನ್ನುತ್ತಾರೆ. ಪ್ರಸ್ತುತ ಸಮಾಜಿಕ ವಿದ್ಯಮಾನದಲ್ಲಿ ಒಬ್ಬ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಯ ನಡುವೆ ಒಂದು ಧರ್ಮ ಜಾತಿಯಿಂದ ಇನ್ನೊಂದು ಧರ್ಮ ಜಾತಿಯ ನಡುವೆ ಒಂದು ವರ್ಗ ವ್ಯವಸ್ಥೆಯಿಂದ ಇನ್ನೊಂದು ವರ್ಗ ವ್ಯವಸ್ಥೆಯ ನಡುವಿನ ದ್ವೇಷ, ಸಂಘರ್ಷಗಳು, ಶೋಷಣೆ, ಅಸಹನೆ, ನಿರ್ಲಕ್ಷ, ತಾರತಮ್ಯ, ಅಪನಂಬಿಕೆ, ಬೆಳೆಸಕೊಂಡಿರುವುದಲ್ಲದೆ ಇಂದಿನ ಕಲಿಯುಗದಲ್ಲಿ ಒಬ್ಬ ವ್ಯಕ್ತಿಯ ಪರಸ್ಪರ ಆಗಮನವನ್ನು ಸಂಶಯದಿಂದ ನೋಡುವುದು ಮತ್ತು ತಮ್ಮ ಸ್ವತಂತ್ರ್ಯಕ್ಕೆ ಇತರರಿಂದ ಧಕ್ಕೆ ಎನ್ನುವಂತೆ ಜೀವಿಸುತ್ತಿರುವುದು ಸಮಗ್ರ ದೇಶದ ಶಾಂತಿಗೆ ಧಕ್ಕೆಯನ್ನೂಂಟು ಮಾಡುವ ಗಂಭೀರ ಸಮಸ್ಯೆಯಾಗಿ ಬೆಳೆಯುತ್ತಿದೆ. ಈ ತರಹದ ಅಸಹಿಷ್ಣುತೆ ಸಮಾಜದ ಎಲ್ಲಾ ಕಡೆಯೂ ಕಂಡು ಬರುತ್ತಿದೆ. ಆದರೂ ಅಸಹಿಷ್ಣುತೆ

ಅಂಶಗಳು ಆಯಾ ಸ್ಥಳ, ಸನ್ನಿವೇಶಗಳಿಗೆ ತಕ್ಕಂತೆ ಭಿನ್ನವಾಗಿರಬಹುದು ಆದರೆ ಈ ಸಮಸ್ಯೆದ ಸ್ವರೂಪ ಸಾರ್ವತ್ರಿಕ ರೂಪದಲ್ಲಿ ಮಾತ್ರ ನೋವು ಮತ್ತು ತೊಂದರೆಯನ್ನು ಕೊಡುತ್ತವೆ.

ಹೀಗಾಗಿ ಅತೃಪ್ತರಾದ, ಶೋಷಣೆಗೆ ಒಳಗಾದ ಜನರು ತಮ್ಮ ದೌರ್ಜನ್ಯಗಳನ್ನು ಎದರಿಸಲು ಮತ್ತು ರಾಜಕೀಯ ವ್ಯಕ್ತಿಗಳ ಕಪಟತನ ಲಂಚಗುಳಿತನ, ದ್ವಂದತೆ, ಸ್ವಜನ ಪಕ್ಷಪಾತ, ಹೇಳುವುದೊಂದು ಮಾಡುವುದಂದು ಪ್ರವೃತ್ತಿಯ ವಿರುದ್ಧ ಮತ್ತು ವೈಯಕ್ತಿಕ ಮತ್ತು ಸಾಮೂಹಿಕ ಶೋಷಣೆಯ ಅಪರಾಧಿಗಳು ಹೆಚ್ಚಾಗುತ್ತಿದ್ದಂತೆ ಅದರ ವಿರುದ್ದ ಜನರು ಸಹನೆ ಕಳೆದುಕೊಳ್ಳುತ್ತಿದ್ದಾರೆ. ಅಸಹಾಯಕರು ಬಲಿಯಾದರೆ ಸಮರ್ಥರು ಅದರಿಂದ ಹೊರಗು ಬರಬಹುದು ಮತ್ತು ಕುಟಿಲ ಬುದ್ದಿಯವರ ಜೊತೆಗೆ ಸೇರಿಕೊಂಡು ಸರಿ ತಪ್ಪುಗಳ ನಿರ್ಣಯ ಮಾಡದೆ ಕೆಟ್ಟ ಸ್ವರೂಪದ ಭಾವನೆ ಹುಟ್ಟುಹಾಕಿ ಅದನ್ನೆ ಮುಂದು ವರೆಸಿಕೊಂಡು ಹೋಗುವವರು ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ವಿದ್ಯಾವಂತರು, ಪ್ರಮಾಣಿಕರು, ಸಮಾಜ ಸೇವೆಯ ಕಾಳಜಿ ಮಾಡುವವರು ಮಾನವೀಯ ಮೌಲ್ಯಗಳನ್ನು ಪಾಲಿಸುವವರು ಇಂತಹ ವ್ಯವಸ್ಥೆಯ ವಿರುದ್ಧ ರೋಸಿ ಹೋಗಿ ಕೆಟ್ಟ ಶಕ್ತಿಗಳ ವಿರುದ್ಧ ರೊಚ್ಚಿಗೇಳಲು ಮನಸ್ಸಿದ್ದರು ಬೆಂಬಲವಿಲ್ಲದೆ ಅಥವಾ ಅಸಹಾಯಕತೆಯಿಂದ ಸುಮ್ಮನಾಗುತ್ತಾರೆ ಅದನ್ನೆ ಅರಾಜಕತೆ ಎನ್ನಬಹುದು.

ಶಿಕ್ಷಣದಿಂದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಎತ್ತಿ ಹಿಡಿದು ಸಮಾಜದಲ್ಲಿ ಕಂಡಬರುವ ಅನೀತಿ, ಭ್ರಷ್ಟಚಾರಗಳ ವಿರುದ್ದ ಸಿಡಿದೇಳುವ ಮನೋಭಾವ ಜಾಗೃತ್ತವಾಗಬೇಕಾಗಿದೆ. ಹೀಗೆ ಜಾಗೃತವಾದಾಗ ಅನೇಕ ವಿಭಿನ್ನ ಮನಗಳು ಒಂದುಗೂಡಿ ಸಮಾನತೆಯ ಸಮಾಜ ಸ್ಥಾಪಿಸಲು ಸೂಕ್ತವಾದ ವಿಚಾರಗಳನ್ನು ಸಂಗ್ರಹಿಸಿ ಕಾರ್ಯಾರೂಪಕ್ಕೆ ತರುವುದು ಇಂದಿನ ದಿನದ ಅನಿವಾರ್ಯ ಮತ್ತು ಅವಶ್ಯಕವಾಗಿದೆ. ಒಟ್ಟಿನಲ್ಲಿ ಸಮಾಜದ ಒಂದು ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಮತ್ತು ಸಾರ್ವಜನಿಕರು ಕೂಡಿ ಕಾರ್ಯವನ್ನು ಕೈಗೊಂಡಾಗ ಮಾತ್ರ ಯಶಸ್ವಿಯಾಗುತ್ತವೆ. ಹೀಗಾಗಿ ಇಂದಿನ ದಿನಗಳಲ್ಲಿ ಎಲ್ಲರೂ ಪರಸ್ಪರ ವಿರೋಧಿಸುವ ಸ್ವಭಾವವನ್ನು ಬಿಟ್ಟು ಪರಸ್ಪರ ಹೊಂದಾಣಿಕೆಯ ಗುಣಗಳು ಬೆಳೆಸಿಕೊಂಡು ಸಮಾಜದಲ್ಲಿನ ಇಂತಹ ಸಮಸ್ಯೆಗಳನ್ನು ಮೂಲಸಹಿತ ಕಿತ್ತುಹಾಕಲು ಎಲ್ಲರೂ ಒಂದಾಗಿ ಪ್ರಯತ್ನಿಸಬೇಕಾಗಿದೆ.

## ಅಸಹಿಷ್ಣತೆಯ ಅರ್ಥ: Meaning of the Intolerance

ಒಂದು ವ್ಯಕ್ತಿಯ ವಿರುದ್ದ, ಒಂದು ವ್ಯವಸ್ಥೆಯ ವಿರುದ್ದ ಅಥವಾ ಒಂದು ಸಮುದಾಯದ ವಿರುದ್ಧ ಇನ್ನೊಬ್ಬ ವ್ಯಕ್ತಿ ಅಥವಾ ಸಮೂಹ ಹೊಂದಿರುವ ಅಸೂಯೆ ಮತ್ತು ಜಾಗೃತಿಯನ್ನು ಅಸಹಿಷ್ಣುತೆ ಎನ್ನುವರು. ಇನ್ನೊಂದು ಅರ್ಥದಲ್ಲಿ ದೌರ್ಜನ್ಯ ದಬ್ಬಾಳಿಕೆ ಶೋಷಣೆಗೆ ಒಳಗಾದ ವ್ಯಕ್ತಿಯು ತನ್ನ ಅಕ್ರೋಶವನ್ನು ಹೊರಹಾಕುವುದನ್ನು ಕೂಡ ಅಸಹಿಷ್ಣತೆ ಎನ್ನುತ್ತಾರೆ. ಇನ್ನು ಮುಂದುವರೆದು ಹೇಳುವುದಾದರೆ ಶೋಷಣೆಗಳನ್ನು ಮೊದಲಿನಿಂದಲೂ ಸಹನೆಯಿಂದ ತಾಳುತ್ತಾ ಬಂದಿರುವವರು ಅಸಹನೆಯನ್ನು ತೋರಿ ಶೋಷಣೆಯನ್ನು ವಿರೋಧಿಸುದೇ ಅಸಹಿಷ್ಣತೆ ಎನ್ನುವರು.

ಒಟ್ಟಿನಲ್ಲಿ ಸಹಿಷ್ಣುತೆಯನ್ನು ತಿರಸ್ಕರಿಸುವುದು ಸಹನೆಯ ಕೊರತೆಯನ್ನು ಅಥವಾ ಒಬ್ಬರ ಅಭಿಪ್ರಾಯವನ್ನು ತನ್ನಷ್ಟಕ್ಕೆ ತಾನೆ ನಂಬಿ ಇನ್ನೊಬ್ಬರನ್ನು ವಿರೋಧಿಸುವ ಪ್ರಕ್ರೀಯೆಯನ್ನು ಅಸಹಿಷ್ಣತೆ ಎನ್ನುವರು.

Intolerance refers to an unwillingness to accept the beliefs or behavior of someone different from you is not a quality you want to have. Intolerance is what leads to hate crimes and discrimination.

The word intolerance comes from a combination of the Latin *in-* meaning "not" and *tolerantem* meaning "to bear, endure." Intolerance is not being able to bear or endure beliefs that are different from your own. You may commonly hear of it used with respect to religious intolerance, which is an unwillingness to accept different religious beliefs.

## DEFINITION OF INTOLERANCE

**ಕ್ಯಾಂಬ್ರಿಜ್ ಶಬ್ದಕೋಶದ ಪ್ರಕಾರ :** ತಮ್ಮದಲ್ಲದೆ ವಿಭಿನ್ನ ವಿಚಾರವನ್ನು ಒಪ್ಪದೆ ಇರುವುದು ಅಥವಾ ಪರರ ವಿಚಾರಗಳನ್ನು ತಿರಸ್ಕರಿಸುಲು ವ್ಯಕ್ತಪಡಿಸುವ ಕ್ರೋಧವನ್ನು ಅಸಹಿಷ್ಣಿತೆ ಎನ್ನುತ್ತಾರೆ.

**According to Collins English Dictionary**

The fact of refusing to accept ideas, beliefs, or behavior that is different from your own.

**According to dictionary.com**

Incapacity or indisposition to bear or endure: intolerance to heat. Abnormal sensitivity or allergy to a food, drug, etc. an intolerant act.

Intolerance is unwillingness to let other people act in a different way or hold different opinions from you. His intolerance of any opinion other than his own.

## ಅಸಹಿಷ್ಣತೆ ಅಧ್ಯಯನದ ಮಹತ್ವ Importance of Intolerance

1) ತಮ್ಮ ಚಿಂತೆಯೆ ಶ್ರೇಷ್ಟ ಎಂಬ ಭಾವನೆ ಬಾರದಂತೆ ಎಚ್ಚರ ವಹಿಸುವುದು — Reduces individual Ego Feeling
2) ಇನ್ನೊಬ್ಬರ ಚಿಂತನಿಗೆ ಪ್ರತಿಕಾರ ವಿಮರ್ಶೆ ಸೂಚಿಸುವುದು — Criticism or opposes the others ideas
3) ಸತ್ಯತೆಯನ್ನು ಪ್ರತಿಪಾದಿಸುವುದು
4) ಜೀವನ ಕಲೆಗೆ ಅವಶ್ಯಕ — Important to life skill
5) ಹೋಲಿಕೆ & ಸಾಮ್ಯತೆ — Similarity
6) ವ್ಯಕ್ತಿಯ ಮೂಲಗುಣದ ಅರಿಯುವಿಕೆ — To understand basic quality of individual
7) ಸ್ವಾಭಾವಿಕವಾದ ಬೇರೆಯವರ ಬೇಸರ, ಅತೃಪ್ತಿ ನೋವುಗಳನ್ನು ತಿಳಿಯುವುದು — To understand undesired troubles and anxiety
8) ಐತಿಹಾಸಿಕ ಘಟನೆ ಮತ್ತು ವಿಷಯಗಳನ್ನು ಮೆಲಕು ಹಾಕುವುದು — To review historical issues/subjects
9) ಪ್ರಸ್ತುತ ಕಾಲಮಾನದ ಚೌಕಟ್ಟಿನಲ್ಲಿ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು — To understand current events
10) ಊಹಾಪೋಹಗಳನ್ನು ದೂರಸರಿಸುವುದು — Remove the misunderstanding
11) ಪೂರ್ವಗ್ರಹಗಳಿಂದ ದೂರ ಉಳಿಯುವುದು. — Remove the prejudices

## ಅಸಹಿಷ್ಣತೆಯ ಕಾರಣಗಳು Causes of Intolerance

| | |
|---|---|
| 1. ವಿಚಾರಧಾರೆಯಲ್ಲಿ ಭಿನ್ನಭಿಪ್ರಾಯಗಳು | Differences in thoughts |
| 1. ಪರರ ವಿಚಾರಗಳಿಗೆ ಮಾನ್ಯತೆ ಮಾಡದಿರುವುದು | Showing Disrespect other view points |
| 2. ಕೋಮುವಾದಗಳು | Communalism |
| 3. ವ್ಯಕ್ತಿಗಳ ವಿಭಿನ್ನ ದೃಷ್ಟಿಕೋನ | Individual Differences |
| 4. ಸಾಂಸ್ಕೃತಿಕ ವ್ಯತ್ಯಾಸಗಳು | Cultural Differences |
| 5. ಆಸಕ್ತಿಗಳಲ್ಲಿ ವ್ಯತ್ಯಸಗಳು | Clash of interest (Ideological) |
| 6. ರಾಷ್ಟ್ರೀಯ ಅಂಶಗಳು | National Issues |
| 7. ಶೈಕ್ಷಣಿಕ ಅಂಶಗಳು | Educational Components |
| 8. ಅವಕಾಶಗಳ ಕೊರತೆ | Lack of Opportunities |
| 9. ವಿದೇಶಿಯರ ಪ್ರಭಾವ | Influence of Foreigners |
| 10. ಆದರ್ಶವಾದ ಕೊರತೆ | Lack of Idealism |
| 11. ಮೌಲ್ಯಗಳ ಅಧಃಪತನ | Value Demoralizing |

## ಅಸಹಿಷ್ಣುತೆಯ ಪರಿಣಾಮಗಳು Consequences of Intolerance

| | | |
|---|---|---|
| 1. | ಯುವ ಜನಾಂಗದ ಸಾಮರ್ಥ್ಯಗಳು ಕುಗ್ಗುವಿಕೆ | Reduces youth ability |
| 2. | ಕಾನೂನು ಕ್ರಮದ ಸಮಸ್ಯೆಗೆ ನಾಂದಿ ಮಾಡುತ್ತದೆ | It creates problem maintain law |
| 3. | ಸಾರ್ವಜನಿಕ ಹಿತಾಸಕ್ತಿಗೆ ನಷ್ಟವಾಗುತ್ತದೆ | Losses the public interest |
| 4. | ಸಾಮೂಹಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ | Effects on Public Health |
| 5. | ನೈತಿಕತೆಯು ಅಧಃಪತನಗೊಳ್ಳುತ್ತದೆ | Moral Demoralizing |
| 6. | ವೈಯಕ್ತಿಕ ವಿಘಟನೆಯಾಗುತ್ತದೆ. | Individual disorganization |
| 7. | ಕೌಟುಂಬಿಕ ವಿಘಟನೆಯಾಗುತ್ತದೆ | Family disorganization |
| 8. | ಸಾಮಾಜಿಕ ವಿಘಟನೆಯಾಗುತ್ತದೆ | Social disorganization |
| 9. | ಆಡಳಿತ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತದೆ | Effects on administrative |
| 10. | ಮಕ್ಕಳು & ಯುವಕರು ಮೇಲೆ ಪರಿಣಾಮ ಬೀರುತ್ತದೆ | Effects on youth and children |
| 11. | ರಾಷ್ಟ್ರದ ಏಕತೆ ಮತ್ತು ಅಭಿವೃದ್ಧಿಗೆ ಮಾರಕವಾಗುತ್ತದೆ. | Problems to development and integration |

## ಅಸಹಿಷ್ಣುತೆಯ ಪರಿಹಾರೋಪಾಯಗಳು Remedial Measures of Intolerance

ಅಸಹಿಷ್ಣುತೆಯು ಮಾನಸಿಕತೆಗೆ ಸಂಬಂದಿಸಿದ್ದು ವಿಭಿನ್ನ ವರ್ಗದ ಜನರ ವಿಚಾರಗಳನ್ನು ಆಧರಿಸಿ ಆಚರಣೆಯ ಆಧಾರದ ಮೇಲೆ ಪರಿಹಾರಗಳನ್ನು ಕಂಡುಕೊಳ್ಳವುದು ಅವಶ್ಯಕವಾಗಿದೆ. ಈ ರೀತಿಯ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳು, ಪೋಷಕರು,

ಅಧ್ಯಾಪಕರು, ಸರ್ಕಾರಿ, ನೌಕರರರು, ಪೋಲಿಸ್ ವರಿಷ್ಠ ಅಧಿಕಾರಿಗಳು, ರಾಜಕಾರಣಿಗಳು, ವಿಶ್ವವಿದ್ಯಾಲಯ ಅಧಿಕಾರಿಗಳು, ವಿಭಿನ್ನವಾದ ತಳಹದಿಯ ಮೇಲೆ ಯೋಚಿಸಿ ಪರಿಹಾರಗಳನ್ನು ಸೂಚಿಸುವುದು & ಪರಿಹಾರಗಳು ಕೈಗೊಳ್ಳಲು ಮುಂದಾಗಬೇಕಾದುದು ಅವಶ್ಯಕವಾಗಿದೆ. ಈ ಸಮಸ್ಯೆಯನ್ನು ಅಧ್ಯಯನ ಮಾಡಿದ ವಿಭಿನ್ನ ಕ್ಷೇತ್ರಗಳ ಸದಸ್ಯರ ನಡುವಿನ ಸಂಬಂಧಗಳ ವಿವಿಧ ಚರ್ಚೆಗಳನ್ನು ಆಧರಿಸಿ ಅದರ ಮೌಲಿಕ ಬಯಕೆ ಅವಶ್ಯಕತೆಗಳನ್ನು ಗಮನದಲ್ಲಿಟ್ಟಿಕೊಂಡು ಚಿಂತಕರು ಸಂಶೋಧಕರು ಶಿಕ್ಷಣ ತಜ್ಞರು ಆಡಳಿತ ಮತ್ತು ಕಾನೂನು ಪರಿಣಿತರು, ಬುದ್ಧಿವಂತ ಅನುಭವಿಗಳು ಈ ಸಮಸ್ಯೆಯನ್ನು ಪರಿಕ್ಷಿಸಿ ಸಾಮಾಜಿಕ ಪರಿಸರಕ್ಕೆ ಸೂಕ್ತವಾದ ಪರಿಹಾರವನ್ನು ಕಂಡುಕೊಳ್ಳವ ಪ್ರಯತ್ನ ಮಾಡಬೇಕಾಗಿದೆ. ಅವುಗಳೆಂದರೆ

| | |
|---|---|
| 1. ಪೋಷಕರ ಜವಾಬ್ದಾರಿ | Responsibility of parents, |
| 2. ಶಿಕ್ಷಣ ಪದ್ದತಿಯ ಸುಧಾರಣೆ | Improvement of education system |
| 3. ನೀತಿ ಶಿಕ್ಷಣ | Moral education |
| 4. ಬೋಧನಾ ಮಟ್ಟ ಹೆಚ್ಚಿಸುವುದು | Standardization of teaching |
| 5. ಯುವಕ ಸಂಘಗಳ ಪಾತ್ರ | Role of Youth organization |
| 6. ಸಮರ್ಥ ನಾಯಕತ್ವದ ಹುಡುಕು ಮತ್ತು ಬೆಳೆವಣಿಗೆ | Identification and Development of capable Leadership |
| 7. ರಾಷ್ಟ್ರೀಯತೆ ಮತ್ತು ರಾಷ್ಟ್ರ ಪ್ರೇಮ ಬೆಳೆಸುವುದು | Development of Patriotism |

## ಆಧಾರ ಗ್ರಂಥಗಳು


- ಪ್ರೋ.ಜಿ. ಸುಬ್ರಮಣ್ಯ (2017) ಸಮಕಾಲೀನ ಸಮಾಜಶಾಸ್ತ್ರ ಸಪ್ನ ಬುಕ್ ಹೌಸ 3ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು
- ಎಸ್. ಬಿ. ಜೋಗುರ (2008) ಸಮಾಜಶಾಸ್ತ್ರ ವಿಜೇತ್ ಪ್ರಕಾಶನ ಗದಗ
- ಚ.ನ ಶಂಕರರಾವ್ ಸಮಾಜಶಾಸ್ತ್ರದ ಸಮಸ್ಯೆಗಳು
- https://www.collinsdictionary.com/dictionary/english/intolerance
- https://www.vocabulary.com/dictionary/intolerance
- https://www.dictionary.com/browse/intolerance



PREPARED BY

Dr. A. G. Khan Associate professor of Sociology GFGC Chittapur

Dr. Manikamma. N. Sultanpur, Asst. Prof. of Sociology, Smt. C. B. Patil Degree College Chincholi


**THANK YOU**

STAY HOME, STAY SAFE AND STUDY STEADILY